ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ
SDS TRC & RAJIV GANDHI INSTITUTE OF CHEST DISEASES
(As Autonomous Institute, Government of Karnataka)
Reg. No. : SOR/BLU/DR/671/09-10 dated 23-09-2009
(Superspeciality Referral Hospital & Post Graduate Institute)

ಸಂಖ್ಯೆ: ಎಸ್‌ಡಿಎಸ್/ನೇಮಕಾತಿ/01/ಕ.ಕ/2021-22/03 ದಿನಾಂಕ:28.03.2023

**ಅಧಿಕೃತ ಜ್ಞಾಪನಾ ಪತ್ರ**

ವಿಷಯ: ಕಲ್ಯಾಣ-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಶುಶ್ರೂಷಾಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ ನೀಡುವ ಕುರಿತು.

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ: ಎಸ್‌ಡಿಎಸ್/ನೇಮಕಾತಿ/ 01/ ಕ.ಕ/ 2021-22, ದಿನಾಂಕ: 23.12.2021.

2 ) ಅಂತಿಮ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಎಸ್‌ಡಿಎಸ್/ನೇಮಕಾತಿ/ 01/ಕ.ಕ/2021-22, ದಿನಾಂಕ: 13/02/2023

********

ಈ ಸಂಸ್ಥೆಯ ಉಲ್ಲೇಖಿತ ನೇಮಕಾತಿ ಅಧಿಸೂಚನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯ ಅನುಸಾರ ಕಲ್ಯಾಣ-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ ಮೀಸಲಿರಿಸಿದ ಶುಶ್ರೂಷಾಧಿಕಾರಿಗಳ ಹುದ್ದೆಗಳಿಗೆ ವೇತನ ಶ್ರೇಣಿ ರೂ. 33450-850-3600-950-39800-1100-46400-1250-53900-1450-62600 ರಲ್ಲಿ ಎರಡು ವರ್ಷಗಳ ಖಾಯಂಪೂರ್ವ ಸೇವಾ ಅವಧಿಯ ಮೇರೆಗೆ ಈ ಕೆಳಕಂಡ ಅಭ್ಯರ್ಥಿಯನ್ನು ತಾತ್ಕಾಲಿಕವಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ನೇಮಕ ಮಾಡಿ ನಿಯುಕ್ತಿಗೊಳಿಸಲಾಗಿದೆ.

| ಕ್ರ. ಸಂ. | ಅಂತಿಮ ಆಯ್ಕೆ ಪಟ್ಟಿಯಲ್ಲಿನ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ವಿಳಾಸ |
|---|---|---|---|
| 01. | 02 | ಶ್ರೀ ಪ್ರಶಾಂತ ಕುಮಾರ<br>ತಂದೆ: ವಾಸಪ್ಪ ದಾಸರ | ಕಿನ್ನಾಳ ಗ್ರಾಮ, ಕೊಪ್ಪಳ ತಾಲ್ಲೂಕು ಹಾಗೂ ಜಿಲ್ಲೆ |

1. ಈ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977 ರನ್ವಯ ಎರಡು ವರ್ಷಗಳ ಖಾಯಂ ಪೂರ್ವ ಸೇವಾವಧಿಗೆ ಒಳಪಟ್ಟಿರುತ್ತದೆ
2. ಈ ನೇಮಕಾತಿ ಆದೇಶದ ಪತ್ರ ಸ್ವೀಕರಿಸಿದ 15ದಿನಗಳೊಳಗಾಗಿ ಅಭ್ಯರ್ಥಿಯು ಈ ಸಂಸ್ಥೆಯ ನಿರ್ದೇಶಕರಲ್ಲಿ ತಮ್ಮ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದು. ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 18 (3) ರನ್ವಯ ಯಾವುದೇ ಸೂಚನೆ ಇಲ್ಲದೆ ರದ್ದಾಗುವುದು.
3. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವಾಗ ಎಲ್ಲಾ ಮೂಲ ದಾಖಲೆಗಳನ್ನು ಅಂದರೆ ಸದರಿ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯ ಪ್ರಮಾಣ ಪತ್ರ, ಎಸ್‌ಎಸ್‌ಎಲ್‌ಸಿ ಅಂಕ ಪಟ್ಟಿ, 371 (ಜೆ) ಪ್ರಮಾಣ ಪತ್ರ ಇತ್ಯಾದಿಗಳನ್ನು ದಾಖಲೆಗಳನ್ನು ಪರಿಶೀಲನೆಗಾಗಿ ಹಾಜರುಪಡಿಸತಕ್ಕದ್ದು.
4. ದೈಹಿಕ ಅರ್ಹತಾ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಪಡೆದು ಸಲ್ಲಿಸತಕ್ಕದ್ದು, ಅಭ್ಯರ್ಥಿಯು ಜೇಷ್ಠತೆಯು ಅಂತಿಮ ಆಯ್ಕೆ ಪಟ್ಟಿಯ ಕ್ರಮಾಂಕದಂತೆ ಇರುತ್ತದೆ.
5. ಈ ನೇಮಕಾತಿ ಆದೇಶವು ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯ/ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಹೂಡಲಾಗುವ/ಹೂಡಲಾಗಿರುವ ತೀರ್ಪಿನನ್ವಯ ಪುನರ್ ಅವಲೋಕನಕ್ಕೆ ಒಳಪಟ್ಟಿರುತ್ತದೆ
6. ಅಭ್ಯರ್ಥಿಯು ಸಲ್ಲಿಸಿರುವ ಅಂಕ ಪಟ್ಟಿಗಳನ್ನು ಹಾಗೂ ಮೂಲ ದಾಖಲಾತಿಗಳ ಪರಿಶೀಲನೆ ವರದಿ ವ್ಯತಿರಿಕ್ತವಾಗಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
7. ಅಭ್ಯರ್ಥಿಯು ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ನಡವಳಿಕೆ ಪ್ರಮಾಣ ಪತ್ರವನ್ನು ಪಡೆದು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಹಾಜರುಪಡಿಸಬೇಕು.
8. ಅಭ್ಯರ್ಥಿಯ ಜೇಷ್ಠತೆಯ ಅಂತಿಮ ಆಯ್ಕೆಯ ಪಟ್ಟಿಯ ಕ್ರಮಾಂಕದಂತೆ ಇರುತ್ತದೆ.

9. **ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಯ ಕಾರ್ಯ ನಿರ್ವಹಣೆ**
ನೇಮಕಾತಿ ಹೊಂದಿದ ಅಭ್ಯರ್ಥಿಯ ಸಂಸ್ಥೆ/ಆಸ್ಪತ್ರೆಯ ಶುಶ್ರೂಷಾ ಸೇವೆಗೆ ಸಂಬಂಧಿಸಿದ ಹಾಗೂ ಮೇಲಾಧಿಕಾರಿಗಳು ಸೂಚಿಸುವ ಎಲ್ಲಾ ಕರ್ತವ್ಯಗಳು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು ಹಾಗೂ ವಿದ್ಯಾರ್ಹತೆ ಆಧಾರದ ಮೇಲೆ ವೃಂದ ಬದಲಾವಣೆಗೆ ಅವಶ್ಯಕತೆಯಿರುವುದಿಲ್ಲ.

10. ಅಭ್ಯರ್ಥಿಯು ಈ ಕೆಳಕಂಡ ಲಿಖಿತ ರೂಪದ ಘೋಷಣೆಗಳನ್ನು ಕರ್ತವ್ಯಕ್ಕೆ ಹಾಜರಾಗುವ ಮುನ್ನ ಸಲ್ಲಿಸತಕ್ಕದ್ದು.

5) ನಾನು ಮದುವೆಯಾಗಿಲ್ಲ/ನಾನು ಮದುವೆಯಾಗಿದ್ದೇನೆ. ಒಬ್ಬರಿಗಿಂತ ಹೆಚ್ಚು ಜೀವಂತ ಪತಿ/ಪತ್ನಿ ಇರುವುದಿಲ್ಲ
6) ಶ್ರೀಮತಿ/ಶ್ರೀ______________________________ಆದ ನಾನು ಪ್ರಾಮಾಣಿಕವಾಗಿ, ಭಾರದ ದೇಶದ ಸಂವಿಧಾನಕ್ಕೆ ಬದ್ಧಳಾ: ನಾಗಿರುತ್ತೇನೆ ಮತ್ತು ನನ್ನ ಕರ್ತವ್ಯವನ್ನು ನಿಷ್ಠೆಯಿಂದಲೂ ನಿಸ್ವಾರ್ಥತೆಯಿಂದಲೂ ನಿಷ್ಪಕ್ಷಪಾತವಾಗಿ ನಿರ್ವಹಿಸುತ್ತೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
7) ಶ್ರೀಮತಿ/ಶ್ರೀ____________________ ಆದ ನಾನು ನನ್ನ ನೇಮಕಾತಿಯು ತಾತ್ಕಾಲಿಕವಾಗಿದ್ದು ಮತ್ತು ಯಾವುದೇ ಸೂಚನೆ/ಕಾರಣಗಳನ್ನು ನೀಡದೇ ಯಾವುದೇ ಸಮಯದಲ್ಲಾದರೂ ಕರ್ತವ್ಯದಿಂದ ವಜಾ ಮಾಡಬಹುದೆಂದು ಖಾತರಿ ಪಡಿಸಿಕೊಂಡು ಈ ನೇಮಕಾತಿಯನ್ನು ಒಪ್ಪಿರುತ್ತೇನೆ.
8) ಶ್ರೀಮತಿ/ಶ್ರೀ__________________________ಆದ ನಾನು ನನ್ನ ಮೇಲೆ ಪೋಲೀಸ್ ಠಾಣೆಯಲ್ಲಿ ಅಥವಾ ನ್ಯಾಯಾಲಯದಲ್ಲಿ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಾತಿರುವಿಲ್ಲವೆಂದು ಪ್ರಮಾಣೀಕರಿಸುತ್ತೇನೆ ಮತ್ತು ದಾಖಲಾಗಿರುವುದು ಕಂಡು ಬಂದಲ್ಲಿ ಕರ್ತವ್ಯದಿಂದ ವಜಾ ಮಾಡಬಹುದೆಂದು ಖಾತರಿ ಪಡಿಸಿಕೊಂಡು ಈ ನೇಮಕಾತಿಯನ್ನು ಒಪ್ಪಿರುತ್ತೇನೆ.

28/3/23

ನಿರ್ದೇಶಕರು
ಎಸ್‌ಡಿಎಸ್ ಟಿಆರ್‌ಸಿ ಮತ್ತು ಆರ್‌ಜಿಐಸಿಡಿ
ಬೆಂಗಳೂರು
28/3/23 28/3/23

**ಪ್ರತಿಯನ್ನು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ**

1. ಸಂಬಂಧಪಟ್ಟ ಅಭ್ಯರ್ಥಿಗೆ
2. ಸಹಾಯಕ ಆಡಳಿತಾಧಿಕಾರಿಗಳು ಮತ್ತು ಆಡಳಿತಾ ವಿಭಾಗ
3. ಶುಶ್ರೂಷ ಅಧೀಕ್ಷಕರು ದರ್ಜೆ – 1 (ಪ್ರಭಾರ)
4. ಸಿಬ್ಬಂದಿ (1) ಮತ್ತು (2) ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಅಭ್ಯರ್ಥಿಯಿಂದ ಮೇಲ್ಕಂಡಂತೆ ಲಿಖಿತ ಹೇಳಿಕೆಯನ್ನು ಪಡೆದು ದೃಢೀಕರಿಸಿ ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು
5. ಲೆಕ್ಕ ಪತ್ರ ವಿಭಾಗ
6. ಕಛೇರಿ ಪ್ರತಿ